ಶ್ರೀ ಕೆ. ಸಿಂಗಾರಿಗೌಡ.—ಸ್ಥಳೀಯ ಅಧಿಕಾರಿಗಳು ಪಾರ್ಟಿ ವೈಷಮ್ಯಗಳ ಮೇರೆಗೆ, ಪಕ್ಷಪಾತ ನೀತಿಯನ್ನನು ನರಿನುತ್ತಿದ್ದಾರೆ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪಾರ್ಟಿ ವೈಷಮ್ಯಗಳ ಮೇರೆ ನಡೆಯುತ್ತಿದ್ದರೆ ಅದನ್ನು ಪರಿಶೀಲನೆ ಮಾಡಿ ಅಂಥವರನ್ನು ಶಿಕ್ಷೆ ಮಾಡಲಾಗುತ್ತದೆ.

ಶ್ರೀ ಕೆ. ಸಿಂಗಾರಿಗೌಡ.—ಹಿಂದೆ ಸಬ್ ಡಿವಿಜ್ ಅಧಿಕಾರಿಗಳು ವರಪಿಯನ್ನು ಕಳುಹಿಸಿದ್ದ ತಾರೀಖು ಮುಂತಾದ ವಿವರಗಳನ್ನು ಕೊಟ್ಟರೆ ಅದನ್ನು ತರಿಸಿಕೊಂಡು ಪರಿಶೀಲನೆ ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮ್ಮ ಆಫೀಸಿನಲ್ಲಿರಬಹುದು. ಫೈಲ್ ತರಿಸಿಕೊಂಡು ಅದನ್ನು ಪರಿಶೀಲನೆ ಮಾಡ ತೆ ನೆ.

ಶ್ರೀ ಎಚ್. ಹುಚ್ಚಮಾಸಿ ಗೌಡ.—ಎಡಗಡೆಯನಾಲಾ ರೈತರು ಅಡ್ಡಿ ಮಾಡಿದ್ದಾರೆಂದು ಈಗತಾನೇ ಮಂತ್ರಿಗಳು ಅಪ್ಪಣೆ ಕೊಡಿ ದರು. ಆದರೆ ಇದರಲ್ಲಿ ನೀರಿನ ತೊಂದರೆಯಾಗುತ್ತದೆನ್ನುವುದಲ್ಲ. ಕಂಚೊ ರ್ಡ್ ಮಡುಬಾಯಿಗಳಿಲ್ಲದೆ ಇರುವುದರಿಂದ, ಅಂದರೆ 10 ಎಕರೆ ಅಚ್ಚುಕಟ್ಟಿಗೆ 50-100 ಎಕರೆ ಅಚ್ಚುಕಟ್ಟಿಗೆ ಬೇಕಾಗುವಷ್ಟು ದೊಡ್ಡ ದೊಡ್ಡ ಮಡುಬಾಯಿಗಳನ್ನಿಟ್ಟಿರುವುದರಿಂದ, ನಾಲೆಗಳಲ್ಲಿ ಹೂಳು (silt) ತೆಗೆನದೆ ಇರುವುದರಿಂದ ಈ ರೀತಿಯಾಗಿದೆ ಎಂದು ಮೊನ್ನೆತಾನೆ ಮಾನ್ಯ ಮಂತ್ರಿಗಳು ಅಲ್ಲಿಗೆ ದಯ ಮಾಡಿಸಿದ್ದಾಗ ಜನಗಳು ಮನವಿಮಾಡಿಕೊಂಡಿದ್ದಾರಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ರೀತಿಯಾಗಿ ಜನಗಳು ಅರ್ಜಿ ಕೊಟ್ಟರು. ನಾನೂ ಕೂಡ ಹೋಗಿ ನೋಡಿದೆ. ನಾಲೆಗಳಲ್ಲಿ ಹೂಳು (silt) ಕ್ರಮವಾಗಿ ತೆಗೆದಿರಲಿಲ್ಲ. ಮತ್ತೆ ದೊಡ್ಡ ದೊಡ್ಡ ಮಡುಬಾಯಿಗಳನ್ನಿಡಲಾಗಿದೆ. ತನ್ಮೂಲಕ ಹೆಚ್ಚು ನೀರು ಪೋಲಾಗುತ್ತದೆಂದು ನನ್ನ ಗಮನಕ್ಕೆ ಬಂತು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನೀರು ಹುಳಿಗಾಲದಲ್ಲಿ ಸಾಕಾದಷ್ಟು ಒದಗುತ್ತದೆಂಬುದು ಇಂಜಿನಿಯರ್ ಅವರ ರಿಪೋರ್ಟ್ ಮುಖಾಂತರ ಸರ್ಕಾರಕ್ಕೆ ಗೊತ್ತಿಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಿಲ್ಟ್ ತೆಗೆಸಿ ನಾಲೆಗಳನ್ನು ದುರಸ್ತುಮಾಡಿಸಿ, ಮಡುಬಾಯಿಗಳನ್ನು ಕೂಡ ಕಡಿಮೆ ಮಾಡಿದರೆ ಆಗ ನೀರು ಹೆಚ್ಚಾಗಿ ಬರುತ್ತದೆಯೇ ಎಂಬುದನ್ನು ಪರಿಶೀಲನೆ ಮಾಡಬೇಕು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ದೊಡ್ಡ ಉಪ್ಪಳ ಅಣೆಗಿಂತ ಚನ್ನಹಳ್ಳಿ ಅಣೆಯಲ್ಲಿ ಬಹಳ ಹೆಚ್ಚಾಗಿ seepage water ಬರುತ್ತದೆಂದು ಸರ್ಕಾರದ ಗಮನಕ್ಕೆ ಬಂದಿಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಚಟ್ಟನಹಳ್ಳಿ ಅಣೆಗಿಂತ ಮೇಲ್ಭಾಗದಲ್ಲಿರುವ ದೊಡ್ಡ ಉಪ್ಪಳದಿಂದ ಬಹುಶಃ ನಾಲೆಯನ್ನು ತೆಗೆದುಕೊಂಡರೆ ಅನುಕೂಲವಾಗುತ್ತದೆ ಮತ್ತು ಇನ್ನೂ ಹೆಚ್ಚಾಗಿ ಬಡಾವಣೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನನ್ನ ಪ್ರಶ್ನೆ ಅದಲ್ಲ. ಇವೆರಡರಲ್ಲಿಯೂ ಕೂಡ ದೊಡ್ಡ ಉಪ್ಪಳ ಅಣೆ ಮೇಲ್ಭಾಗದಲ್ಲಿದೆ. ಚನ್ನಹಳ್ಳಿ ಅಣೆ ಕೆಳಭಾಗದಲ್ಲಿದೆ. ವ್ಯವಸಾಯ ಮಳೆಗಾಲದಲ್ಲಿ ನಡೆಯುತ್ತದೆ. ಕೆಳಭಾಗದಲ್ಲಿರತಕ್ಕ ಚನ್ನಹಳ್ಳಿ ಅಣೆಯಿಂದ ಹೆಚ್ಚಿಗೆ ಬರುವ seepage water ಒದಗಿಸಿದರೆ ಏನೂ ತೊಂದರೆಯಾಗುವುದಿಲ್ಲವಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ದೊಡ್ಡ ಉಪ್ಪಳ ಮೇಲ್ಭಾಗದಲ್ಲಿರುವಾಗ ಅಲ್ಲಿಂದ ಎಷ್ಟು ನೀರು ಬಿಡಲಾಗುತ್ತದೆಯೋ ಅಷ್ಟು ನೀರು ಮಾತ್ರ ಚಟ್ಟನಹಳ್ಳಿ ಅಣೆಗೆ ಬರಬೇಕು. ಹೀಗಿರುವಾಗ seepage water ಎಲ್ಲಿಂದ ಬರುತ್ತದೆ?

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇಂಜಿನಿಯರುಗಳಾಗಿದ್ದರೆ ಈ ವಿಷಯ ಬಹಳ ಸುಲಭದಲ್ಲಿ ಅರ್ಥವಾಗುತ್ತಿತ್ತು. ಮಂತ್ರಿಗಳು non-technical man ಆಗಿರುವುದರಿಂದ ಸ್ವಲ್ಪ ಕಷ್ಟ. ಎರಡು ಅಣೆಗಳಿಗೂ ಮಾರ್ಕೋನಹಳ್ಳಿ ಅಚ್ಚುಕಟ್ಟಿನ ಸೀಪೇಜ್ ಬರುತ್ತದೆ. ಮೇಲ್ಭಾಗದ ಅಣೆಗೆ ಕಡಿಮೆ ಅಚ್ಚುಕಟ್ಟಿರುವುದರಿಂದ ಕಡಿಮೆ ಸೀಪೇಜ್ ಬರುತ್ತದೆ. ಎಂಡನೆಯದಕ್ಕೆ ಮಧ್ಯೆ ಇರತಕ್ಕ ಅಚ್ಚುಕಟ್ಟಿನ ಸೀಪೇಜ್ ಮತ್ತು ದೊಡ್ಡ ಉಪ್ಪಳದಿಂದ 400 ಎಕರೆಗೆ ಬರತಕ್ಕ ನೀರು ಎಲ್ಲ ಸೇರಿ ಚಟ್ಟಹಳ್ಳಿ ಅಣೆಗೆ ಹೆಚ್ಚಿಗೆ collect ಆಗುತ್ತದೆ. ಅಲ್ಲಿಂದ ಕಾಲುವೆ ತೆಗೆಯುವುದು ಸೂಕ್ತವಲ್ಲವೇ. ಎಂದು ಕೇಳುತ್ತಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ದೊಡ್ಡ ಉಪ್ಪಳದಿಂದ ಎಷ್ಟು ಅಚ್ಚುಕಟ್ಟಿನ ಸೀಪೇಜ್ ಬರುತ್ತದೆ ಮತ್ತು ಚಟ್ಟಹಳ್ಳಿ ಅಣೆಯಿಂದ ಎಷ್ಟು ಸೀಪೇಜ್ ಬರುತ್ತದೆ ಎಂದು ಪರಿಶೀಲನೆ ಮಾಡಿ ಹೇಳಬೇಕು.

Anecut near Bagur Village, across Gundlu River.

Q.—404. Sri M. LINGANNA (Nanjangud).—

Will the Government be pleased to state :—

(*a*) whether an estimate was prepared for a small anceut near Bagur Village, Kowlande Hobli, Nanjangud Taluk, across Gundlu river ;

(*b*) how many years back the estimate was prepared and what is the total cost ;

(*c*) whether the villagers of Bagur and Koodlapura agreed to dig the canal if the project is undertaken ;

(*d*) why the work is not yet taken up ?

A.—Sri H. M. CHANNABASAPPA (Minister for Industries).—

(*a*) No.

(*b*), (*c*) and (*d*) Do not arise.

Sri M. LINGANNA.—Is it not a fact that to a question regarding the same subject put a year before last, a negative answer was given ?

*Sri H. M. CHANNABASAPPA.—I am not aware.

Sri M. LINGANNA.—Will you enquire into the matter ?

Sri H. M. CHANNABASAPPA.—Certainly.

ಶ್ರೀ ಯು. ಎಂ. ಮಾದಪ್ಪ.—ಕಮರಹಳ್ಳಿ ಮರಳ ಪಾಡಿ ಅಣೆಕಟ್ಟಿನಿಂದ ಎಷ್ಟು ಪ್ರದೇಶ ಮುಳುಗಡೆ ಯಾಗುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಆ ಪ್ರಶ್ನೆ ನಮ್ಮ ಮುಂದಿಲ್ಲ.

Chamakalahalli Tank near Nangli (Repairs).

Q.—370. Sri G. NARAYANA GOWDA (Mulbagal-Srinivasapur).—

Will the Government be pleased to state :—

(*a*) when the tank of Chamakalahalli near Nangli in Mulbagal Taluk was breached ;

(*b*) whether there were any representations from the villagers of Chamakalahalli for restoring the same ;

(*c*) the steps taken in this behalf ?

A.—Sri H. M. CHANNABASAPPA (Minister for Industries).—

(*a*) There is no tank by that name.

(*b*) and (*c*) Do not arise.

ಶ್ರೀ ಜಿ. ನಾರಾಯಣ ಗೌಡ.—ಚಮಕಲಹಳ್ಳಿ ಕೆರೆ ಒಡೆದುಹೋಗಿರುವುದು ನಿಜವೆ ?

*Sri H. M. CHANNABASAPPA.—There is a tank called Kengalakunte and that has breached.

ಶ್ರೀ ಜಿ. ನಾರಾಯಣ ಗೌಡ.—ಯಾವಾಗ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲವು ದಿವಸಗಳ ಹಿಂದೆ.

ಶ್ರೀ ಜಿ. ನಾರಾಯಣ ಗೌಡ.—ಅದನ್ನು ಜೀರ್ಣೋದ್ಧಾರ ಮಾಡಬೇಕೆಂದೇನಾದರೂ ಅರ್ಜಿ ಗಳು ಬಂದಿದ್ದುವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ —1908ನೆಯ ಇನ ವಿಯಲ್ಲಿ ಎಲ್ಲವನ್ನೂ ಪರಿಶೀಲನೆ ಮಾಡಿ ಕೆಲವು ಅಬ್ಯಾಡನ್ಡ್ ಟ್ಯಾಂಕ್ಸ್‌ಗಳ ಒಂದು ಪಟ್ಟಿಮಾಡಿತ್ತು. ಅದರಲ್ಲಿ ಕೆಂಗಲಕುಂಟೆ ಕೆರೆಯೂ ಸೇರಿದೆ.

ಶ್ರೀ ಜಿ. ನಾರಾಯಣ ಗೌಡ.—ಆ ಪ್ರಾಂತದಲ್ಲಿ ಬೇರೆ ಯಾವುದಾದರೂ ಕೆರೆಗಳಿವೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಚಲ ಕೆರೆ, ಮಾಗಡಿ ಕುಂಟೆ ಕೆರೆ, ಕಲ್ಲೂರಿ ಕೆರೆ ಎಂದು ಮೂರು ಕೆರೆಗಳಿವೆ.

ಶ್ರೀ ಜಿ. ನಾರಾಯಣ ಗೌಡ.—ಈ ಮೂರು ಕೆರೆ ಗಳ ಆಚ್ಚುಕಟ್ಟಿನಲ್ಲಿ ಈಗ ಬೆಳೆಯಾಗುತ್ತಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಜ್ಞಾಪಕವಿಲ್ಲ. ಕೆಂಗಲಕುಂಟೆ ಕೆರೆಯ ತಪಶೀಲು ಬೇಕಾದರೆ ಹೇಳ ಬಹುದು.

ಶ್ರೀ ಜಿ. ನಾರಾಯಣ ಗೌಡ.—ನನಗೆ ಚಮಕಲ ಹಳ್ಳಿಗೆ ಸೇರಿದ ಮೂರು ಕೆರೆಗಳ ವಿಚಾರ ಮಾತ್ರ ಬೇಕು.

Sri H. M. CHANNABASAPPA.—I want notice for that.

ಶ್ರೀ ಜಿ. ನಾರಾಯಣ ಗೌಡ.—ಇದು ಪಾಲಾರ್ ಸೀರೀಸಿಗೆ ಸೇರಿದೆಯೇ ?

Sri H. M. CHANNABASAPPA.—Notice.

ಶ್ರೀ ಜಿ. ನಾರಾಯಣ ಗೌಡ.—ಈ ಮೂರು ಕೆರೆ ಗಳೂ ಜೀರ್ಣೋದ್ಧಾರವಾಗದೆ ರೈತರಿಗೆ ತೊಂದರೆ ಯಾಗಿದೆಯಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ತಪಶೀಲನ್ನು ಬೇಕಾದರೆ ಆಮೇಲೆ ಹೇಳುತ್ತೇನೆ ; ಈಗ ಅದು ನನ್ನಲ್ಲಿಲ್ಲ.

Major tanks in Hosadurga Taluk.

Q.—472. Sri G. BASAPPA (Hosadurga).—

Will the Government be pleased to state :—

(*a*) the number of major tanks in in Hosadurga Taluk ;

(*b*) the number of major tanks restored during the First Five-Year Plan and the amount spent ;

(*c* the number of major tanks proposed to be restored during the Second Five-Year Plan ?

A.—Sri H. M. CHANNABASAPPA (Minister for Industries).—

(*a*) 19.

(*b*) No major tank was restored during this period.

(*c*) The restoration of five tanks is proposed to be taken up subject to allotment of funds.

ಶ್ರೀ ಜಿ. ಬಸಪ್ಪ.—ಹತ್ತೊಂಬತ್ತು ಕೆರೆಗಳ ಪೈಕಿ ಈ ಐದು ವರ್ಷದ ಅವಧಿಯಲ್ಲಿ ಎಷ್ಟು ಕೆರೆಗಳು ಒಡೆದಿವೆ ?

*Sri H. M. CHANNABASAPPA.—I have no information.

ಶ್ರೀ ಜಿ. ಬಸಪ್ಪ.—ಬಲ್ಲಾಳನಮುದ್ರ ಕೆರೆ ಒಡೆದು ಹೋಗಿರುವುದು ಇನ್ನೂ ರಿಪೇರಿಯಾಗಿಲ್ಲ ವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri H. M. CHANNABASAPPA.—The information is that there are 19 major tanks in that Taluk of which 14 are restored and are functioning ; 5 tanks are proposed for restoration.